# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 20005/2023

| | |
|---|---|
| ಸಾಕ್ಷಿದಾರರ ಹೆಸರು : | ರೇಖಾ ಬಿ. |
| ಗಂಡನ ಹೆಸರು : | ಚಂದ್ರಮೂರ್ತಿ ಪಿ. |
| ವಯಸ್ಸು : | 41 ವರ್ಷ |
| ಉದ್ಯೋಗ : | ಅಬಕಾರಿ ನಿರೀಕ್ಷಕರು, ಗೋಕುಲ ವಲಯ, ವಲಯ-2, ಬೆಂಗಳೂರು. |
| ವಾಸ : | ಮಹಾಲಕ್ಷ್ಮಿ ಲೇಔಟ್, ಬೆಂಗಳೂರು. |

**ದಿನಾಂಕ 19/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ದಿನಾಂಕ 30/05/2020 ರಿಂದ 30/06/2024 ರವರೆಗೆ ಅಬಕಾರಿ ನಿರೀಕ್ಷಕರಾಗಿ ಮಡಿವಾಳ ವಲಯ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 26-03-2023 ರಂದು ಸಮಯ ಬೆಳಗ್ಗೆ 8.45 ಸಮಯದಲ್ಲಿ ನಾನು ಕಛೇರಿಯಲ್ಲಿದ್ದಾಗ ಬಾತ್ಮಿದಾರರಿಂದ ಮಾಹಿತಿ ಬಂದಿತ್ತು. ಸದರಿ ಮಾಹಿತಿ ಏನೆಂದರೆ ಒಬ್ಬ ವ್ಯಕ್ತಿ ಬೊಮ್ಮನಹಳ್ಳಿ ಯಿಂದ ರೂಪೇನ ಅಗ್ರಹಾರ ಕಡೆಗೆ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂಬುದಾಗಿರುತ್ತದೆ. ನಂತರ ನಾನು ಮತ್ತು ಚಾಸಾ-4 ರಿಂದ 6 ಮತ್ತು ಚಾಸ -7 ರವರಿಗೆ ಸದರಿ ಮಾಹಿತಿಯನ್ನು ತಿಳಿಸಿದ್ದೇನೆ.

3. ಸದರಿ ಚಾಸಾ-4 ರಿಂದ 7 ರವರೊಂದಿಗೆ ಸ್ಥಳಕ್ಕೆ ಬಂದು ಪಂಚರಾದ ಚಾಸಾ-1 ಮತ್ತು 2 ರವರನ್ನು ಸ್ಥಳಕ್ಕೆ ಕರೆಯಿಸಿ ಅವರಿಗೆ ವಿಷಯವನ್ನು ತಿಳಿಸಿ, ಅವರಿಗೆ ದಾಳಿಯಲ್ಲಿ ಭಾಗವಹಿಸುವಂತೆ ತಿಳಿಸಿರುತ್ತೇನೆ. ನಂತರ ಬೊಮ್ಮನಹಳ್ಳಿ

ಯಿಂದ ರೂಪೇನ ಅಗ್ರಹಾರ ಕಡೆಗೆ ದ್ವೀಚಕ್ರ ವಾಹನದಲ್ಲಿ ಬಂದ ವ್ಯಕ್ತಿಯನ್ನು ನಮ್ಮ ಸಿಬ್ಬಂದಿಯವರು ನನ್ನ ಆದೇಶದಂತೆ ಹಿಡಿದಿರುತ್ತಾರೆ. ಸದರಿ ದ್ವೀಚಕ್ರ ವಾಹನದ ಮುಂಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲ ಕಂಡು ಬಂದಿತು. ಸದರಿ ಚೀಲವನ್ನು ತೆಗೆಯುವ ಮೊದಲು ಸದರಿ ದ್ವೀಚಕ್ರ ವಾಹನ ಸವಾರ ಹಾಗೂ ಪಂಚರ ಸಮಕ್ಷಮ ಶೋಧನಾ ಸಮುಚಿತ ಆಧಾರವನ್ನು ತಯಾರಿಸಲಾಯಿತು. ಸದರಿ ದ್ವೀಚಕ್ರ ವಾಹನ ಸವಾರ ಮತ್ತು ಪಂಚರ ಸಹಿಗಳನ್ನು ಪಡೆದುಕೊಳ್ಳಲಾಯಿತು. ನಂತರ ಪ್ಲಾಸ್ಟಿಕ್ ಚೀಲವನ್ನು ಬಿಚ್ಚಿ ನೋಡಿದಾಗ ಸದರಿ ಚೀಲದಲ್ಲಿ 750 ಎಂ.ಎಲ್ ನ ಬ್ಲಾಕ್ ಅಂಡ್ ವೈಟ್ ಕಂಪನಿಯ ಸ್ಕಾಚ್ ವಿಸ್ಕಿಯ 4 ಬಾಟಲ್ ಗಳು ಇದ್ದವು, 750 ಎಂ.ಎಲ್ ನ ಹಂಡ್ರೆಡ್ ಪೈಪರ್ ಬ್ಲೆಂಡೆಡ್ ವಿಸ್ಕಿಯ 6 ಬಾಟಲ್ ಗಳು ಇದ್ದವು, ಒಟ್ಟು 10 ಬಾಟಲಿಗಳು, ಅಂದರೆ ಒಟ್ಟು ಏಳುವರೆ ಲೀಟರ್ ಅಕ್ರಮ ಮದ್ಯ ಇತ್ತು. ಸದರಿ ಬಾಟಲಿಗಳ ಮೇಲೆ ಅಬಕಾರಿ ಭದ್ರತಾ ಚೀಟಿ ಇರಲಿಲ್ಲ. ಪ್ರತಿಯೊಂದು ಬಾಟಲಿಗಳ ಮೇಲೆ ಮಿಲಿಟರಿಯಲ್ಲಿ ಮಾತ್ರ ಮಾರಾಟಕ್ಕೆ ಎಂದು ನಮೂದಿಸಲಾಗಿತ್ತು. ಸದರಿ ವ್ಯಕ್ತಿಯ ಬಳಿ ಸದರಿ ಮದ್ಯದ ಬಗ್ಗೆ ಯಾವುದಾದರೂ ರಹದಾರಿ ಇದೆಯೆ ಎಂದು ವಿಚಾರಿಸಿದಾಗ ಸದರಿ ವ್ಯಕ್ತಿ ಯಾವುದೇ ರಹದಾರಿ ಇಲ್ಲ ಎಂದು ತಿಳಿಸಿದನು.

4. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ತನ್ನ ಹೆಸರನ್ನು ಮುನಿರಾಜು ಜಿ ಬಿನ್ ಕೃಷ್ಣಯ್ಯ ಮತ್ತು ಮನೆಯ ವಿಳಾಸ ತಿಳಿಸಿದನು. ಸದರಿ ವ್ಯಕ್ತಿಯು ಅಕ್ರಮ ಮದ್ಯವನ್ನು ತಂದಿದ್ದ ದ್ವಿಚಕ್ರವಾಹನವನ್ನು ಪರಿಶೀಲಿಸಿದಾಗ ಅದರ ನೋಂದಣಿ ಸಂಖ್ಯೆಃ ಕೆಎ 03 ಹೆಚ್ ಯು 8982 ಆಗಿರುತ್ತದೆ. ಸದರಿ ದ್ವೀಚಕ್ರ ವಾಹನ ಕೆಂಪು

ಬಣ್ಣದಾಗಿದ್ದು, ಯಮಹಾ ಅಲ್ಪಾ ಕಂಪನಿಯದ್ದಾಗಿರುತ್ತದೆ. ದೋರೆತ ಎಲ್ಲಾ 10 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಕೋರಾ ಬಟ್ಟೆಯಲ್ಲಿ ಚೀಲ ಮಾಡಿ, ಅದರಲ್ಲಿ ಎಲ್ಲಾ ಬಾಟಲಿಗಳನ್ನು ಹಾಕಿ, ಚೀಲದ ಬಾಯಿಯನ್ನು ಕಟ್ಟಿ , ದಾರದಿಂದ ಸುತ್ತಿ , ಅರಗಿನಿಂದ ನಮ್ಮ ಇಲಾಖೆಯ ಮೊಹರನ್ನು ಹಾಕಿರುತ್ತೇವೆ. ಅದಕ್ಕೆ ಪಂಚರ ಸಹಿ ಪಡೆದ ಮಾದರಿ ಚೀಟಿಯನ್ನು ಸಹ ಸದರಿ ಚೀಲಕ್ಕೆ ಅಂಟಿಸಲಾಯಿತು. ಸ್ಥಳದಲ್ಲಿಯೇ ಪಂಚನಾಮೆಯನ್ನು ಬೆಳಗ್ಗೆ 8.45 ರಿಂದ 10.00 ಗಂಟೆಗಯವರೆಗೆ ತಯಾರಿಸಲಾಯಿತು.

5. ನಂತರ ವಾಹನ ಮತ್ತು ಅಮಾನತ್ತು ಪಡಿಸಿಕೊಂಡ ಮದ್ಯ ಹಾಗೂ ಸದರಿ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಮಹಜರ್ ಆಧಾರದ ಮೇಲೆ ಪ್ರಕರಣ ದಾಖಲಿಸಿದ್ದೇನೆ. ನಂತರದಲ್ಲಿ ಜಪ್ತು ಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಸಿಬ್ಬಂದಿಗಳ ಮುಖಾಂತರ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಡಿಸಿರುತ್ತೇನೆ.

6. ಮಾನ್ಯ ಉಪಆಯುಕ್ತರ ಆದೇಶದ ಮೇರೆಗೆ ಪ್ರಕರಣದ ಮುಂದಿನ ತನಿಖೆಯನ್ನು ಅಭಕಾರಿ ಉಪನಿರೀಕ್ಷಕರಾದ ಚಾಸಾ-7 ರವರಿಗೆ ಕೊಟ್ಟಿರುತ್ತೇನೆ. ನಂತರ ವಿಧಿವಿಜ್ಞಾನ ಪರೀಕ್ಷಾ ಕೇಂದ್ರದಿಂದ ರಾಸಾಯನಿಕ ವರದಿ ಬಂದಿದ್ದು, ಅದನ್ನು ನಾನು ಪಡೆದುಕೊಂಡು ಕಡತಕ್ಕೆ ಸೇರಿಸಿದ್ದೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ಮೂಮ-1 ರಿಂದ 10 ಮದ್ಯದ ಬಾಟಲಿಗಳನ್ನು ನೋಡಿ ಗುರುತಿಸಿದ್ದಾರೆ.

7. ಸಾಕ್ಷಿಯು ನಿಪಿ-1 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರತಿಸಿದ್ದಾರೆ. **ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು**. ಶೋಧನಾ ಸಮುಚ್ಚಿತಾ ಆಧಾರದ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಲಾಯಿತು. **ಆದ್ದರಿಂದ ಶೋಧನಾ ಸಮುಚಿತ ಆಧಾರ ವನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ನಿಪಿ-2 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು**. ಸಾಕ್ಷಿಯ ಪ್ರ.ವ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪ್ರ. ವ ವರದಿಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾತು**. ರಾಸಾಯನಿಕ ಪರೀಕ್ಷಾ ವರದಿಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ರಾಸಾಯನಿಕ ಪರೀಕ್ಷಾ ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು**.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

8. ನಮಗೆ ಕರ್ತವ್ಯದ ಪಾಳಿ ಎಂಬುದು ಇಲ್ಲ. ಕರ್ತವ್ಯದಲ್ಲಿದ್ದಾಗ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುತ್ತೇವೆ ಎಂದರೆ ಸರಿ. ನನಗೆ ಬಂದ ಮಾಹಿತಿಯನ್ನು ಮೂಮೆಂಟ್ ರೆಜಿಸ್ಟರ್ ನಲ್ಲಿನ ಮೂದಿಸಿರುತ್ತೇನೆ. ನನಗೆ ಮಾಹಿತಿ ಬಂದಾಗ ಸದರಿ ಅನುಮಾನಿತ ವ್ಯಕ್ತಿಯ ಚಹರೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದರು. ಸದರಿ ಮಾಹಿತಿ ನನಗೆ ಫೋನ್ ಮುಖಾಂತರ ಬಂದಿರುತ್ತದೆ. ಚಾಸಾ-4 ರಿಂದ 7 ರವರಿಗೆ ದಾಳಿ ಕರ್ತವ್ಯಕ್ಕೆ ಬರಬೇಕು ಎಂದು ಲಿಖಿತವಾಗಿ ಆದೇಶ ನೀಡಿರುವುದಿಲ್ಲ, ಸಾಕ್ಷಿ

ಮುಂದುವರಿದು ಮೌಖಿಕವಾಗಿ ಆದೇಶ ನೀಡಿರುತ್ತೇನೆ. ಲಿಖಿತವಾಗಿ ಆದೇಶ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನಮ್ಮ ಕಛೇರಿಯಿಂದ ದಾಳಿ ಮಾಡಿದ ಸ್ಥಳ ಸುಮಾರು 3 ಕಿ.ಮೀ ದೂರ ಇರುತ್ತದೆ. ದಾಳಿ ಮಾಡಿದ ಸ್ಥಳದಿಂದ ಸುಮಾರು 100 ಮೀಟರ್ ದೂರದಲ್ಲಿ ನಾನು ಪಂಚರನ್ನು ಕರೆಸಿಕೊಂಡಿದ್ದೇನೆ. ಪಂಚರಿಗೆ ಲಿಖಿತವಾಗಿ ನೋಟಿಸ್ ಕೊಟ್ಟಿಲ್ಲ. ಲಿಖಿತವಾಗಿ ಪಂಚರಿಗೆ ನೋಟಿಸ್ ಕೊಡಲು ತೋಂದರೆ ಇರಲಿಲ್ಲ ಎಂದರೆ ಸರಿ.

9. ದಾಳಿ ಮಾಡಿದ ಜಾಗ ಸರ್ವಿಸ್ ರೋಡ ಆಗಿದ್ದು, ಅಲ್ಲಿ ಲಗೇಜ್ ಗಳನ್ನು ಸಾಗಿಸುತ್ತಿದ್ದ ಇತರೆ ವಾಹನಗಳು ಸಹ ಓಡಾಡುತ್ತಿದ್ದವು ಎಂದರೆ ಸರಿ. ಸಾರ್ವಜನಿಕರು ಸಹ ಓಡಾಡುತ್ತಿದ್ದರು ಎಂದರೆ ಸರಿ. ಸರ್ವಿಸ್ ರೋಡ ನ ಹಿಂಭಾಗದಲ್ಲಿ ಅಂಗಡಿಗಳು ಇರುತ್ತವೆ. ದಾಳಿಗೂ ಮೊದಲಾಗಲೀ ನಂತರವಾಗಲೀ ಅಲ್ಲಿದ್ದ ಸಾರ್ವಜನಿಕರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಪಂಚರನ್ನು 100 ಮೀಟರ್ ಹಿಂದಿನಿಂದ ನಮ್ಮ ವಾಹನದಲ್ಲಿಯೇ ಕರೆದುಕೊಂಡು ಬಂದಿದ್ದೇವು.

10. ನಾನು ದ್ವಿಚಕ್ರ ವಾಹನವನ್ನು ಹಿಡಿದು ದಾಳಿ ಮಾಡಿದ ಸಮಯದಲ್ಲಿ ಸಾರ್ಜನಿಕರು ಸುತ್ತಮುತ್ತ ಇದ್ದರು ಎಂದರೆ ಸರಿ. ಮೂಮ-1 ರಿಂದ 10 ಮದ್ಯದ ಬಾಟಲಿಗಳು ರಕ್ಷಣಾ ಪಡೆಗೆ ಮೀಸಲಾಗಿದ್ದರಿಂದ ಸಾರ್ವಜನಿಕರಿಗೆ ಸಿಗುವುದಿಲ್ಲ ಎಂದರೆ ಸರಿ. ಆರೋಪಿಯು ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಮೂಮ-1 ರಿಂದ 10 ರವರೆಗಿನ ಬಾಟಲಿ ಮತ್ತು ಬಾಕ್ಸ ಗಳ ಮೇಲೆ ಬಾರ್ ಕೋಡ್ ಇರುತ್ತದೆ ಎಂದರೆ ಸರಿ.

11. ಪಂಚನಾಮೆಗೆ ಪಂಚರು ಮತ್ತು ನಮ್ಮ ಸಿಬ್ಬಂದಿಗಳು ಬಿಟ್ಟು ಸಾರ್ವಜನಿಕರ ಸಹಿಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿ. ನಾನು ಆರೋಪಿಯಿಂದ ಮೂಮ-1 ರಿಂದ

10 ವರೆಗಿನ ವಸ್ತುಗಳನ್ನು ವಶಪಡಿಸಿಕೊಂ ಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಪಂಚನಾಮೆಯನ್ನು ನಮ್ಮ ಕಛೇರಿಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಅದರಲ್ಲಿರುವ ಸಹಿಗಳು ಸಹ ಕಛೇರಿಯಲ್ಲಿಯೇ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-7 ನ್ನು ಸಹ ಕಛೇರಿಯಲ್ಲಿ ತಯಾರಿಸಲಾಯಿತು ಎಂದರೆ ಸರಿಯಲ್ಲ. ಆರೋಪಿಯನ್ನು ದಾಳಿ ಮಾಡಿ ಬಂಧಿಸಿಲ್ಲ, ಸಿಬ್ಬಂದಿಗಳ ಮುಖಾಂತರ ಫೋನ್ ಮಾಡಿ ಕಛೇರಿಗೆ ಕರೆಸಿ ಅಲ್ಲಿ ದಸ್ತಗಿರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮೂಮ-1 ರಿಂದ 10 ಮದ್ಯಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಈ ಪ್ರಕರಣಕ್ಕೆ ಸಂಬಂಧಪಟ್ಟ ಯಾವುದೇ ಕೃತ್ಯಕ್ಕೆ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.